# ಸಂಗಮದಲ್ಲಿ ಬಾಲಿವುಡ್ ನಟಿಯೊಂದಿಗೆ

**ಕಾಲೇಜು ದಿನಗಳಲ್ಲಿ ಪಿಕ್‌ನಿಕ್ ಹೋಗಿದ್ದಾಗ ಅಲ್ಲಿ ಆಕಸ್ಮಿಕವಾಗಿ ಬಾಲಿವುಡ್ ತಾರೆ ವಹಿದಾ ರೆಹಮಾನ್ ಸಿಕ್ಕಿದ್ದರು. ಅವರೊಂದಿಗೆ ಮಾತನಾಡಿ ಫೋಟೊ ಕ್ಲಿಕ್ಕಿಸಿಕೊಂಡಿದ್ದೆ. ಆ ಚಿತ್ರ ಇತ್ತೀಚೆಗೆ ಮತ್ತೆ ನೋಡಲು ಸಿಕ್ಕಿತು. ಅಂದಿನ ನೆನಪುಗಳನ್ನು ಇಂದು ಮೆಲುಕು ಹಾಕಿದಾಗ ರೋಮಾಂಚನವಾಗುತ್ತದೆ.**

**■ ಶಾಂತಾ ವಾದಿರಾಜ**



ಬಾಲ್ಯದ ನೆನಪುಗಳು ಎಂದಿಗೂ ಸಿಹಿ ಸಿಹಿ. ಇದರ ಜತೆಗೆ ಅಂದಿನ ದಿನಗಳಲ್ಲಿ ಕೈಗೊಂಡ ಪ್ರವಾಸದ ನೆನಪುಗಳನ್ನು ಮೆಲುಕು ಹಾಕುವುದು ಮತ್ತೂ ಖುಷಿಕೊಡುವ ವಿಚಾರ. ಪಿಕ್‌ನಿಕ್, ಚಾರಣ, ಪ್ರವಾಸ ಹೋದ ಕಡೆಗಳಲ್ಲಿ 'ಸೆಲೆಬ್ರಿಟಿ'ಗಳೂ ಆಕಸ್ಮಿಕವಾಗಿ ಸಿಗುತ್ತಾರೆ. ಅವರೊಂದಿಗೆ ಫೋಟೊ ಕ್ಲಿಕ್ಕಿಸಿಕೊಳ್ಳುವುದರಲ್ಲಿ ಅಪರಿಮಿತ ಆನಂದವೇ ಮನಸ್ಸಿಗೆ ಸಿಗುತ್ತದೆ. ಅಂತಹ ಫೋಟೊಗಳನ್ನು ಹಲವು ವರ್ಷಗಳ ಬಳಿಕ ಮತ್ತೆ ಮತ್ತೆ ತೆಗೆದು ನೋಡಿದಾಗ ಪರಮಾನಂದವಾಗುತ್ತದೆ.

ನಾನು 1988–89ರಲ್ಲಿ ಅಂಚೆ ತೆರಪಿನ ಮೂಲಕ ಕನ್ನಡ ಎಂ.ಎ.ಗೆ 'ಮಾನಸ ಗಂಗೋತ್ರಿ' ಮೈಸೂರಿನಲ್ಲಿ ಸೇರಿದ್ದೆ. ಬೆಂಗಳೂರಿನ ಸರಕಾರಿ ಕಾಲೇಜಿನಲ್ಲಿ ನಮಗೆ ಸಂಜೆ 6 ಗಂಟೆಯಿಂದ 8 ಗಂಟೆಯವರೆಗೆ ಪಾಠ ಹೇಳಿಕೊಡುತ್ತಿದ್ದರು. ಮಳೆ ಬಂದರೆ ನಮಗೆ ಹೋಗಲು ತೊಂದರೆ ಆಗುತ್ತಿತ್ತು. ಒಂದೊಂದು ಬಾರಿ ವಿದ್ಯುತ್ ಕೈಕೊಡುತ್ತಿತ್ತು. ಹೀಗಾಗಿ ಪಾಠಕ್ಕೆ ತೊಂದರೆ ಆಗುತ್ತಿತ್ತು. ಒಂದು ಬಾರಿ ನಾನೇ ಕೆಲವರಿಗೆ ಹೇಳಿದೆ. 'ದಿನಾ ಬರುವುದಕ್ಕಿಂತ ಶನಿವಾರ–ಭಾನುವಾರ ಪಾಠ ಹೇಳಿಸಿಕೊಳ್ಳಲು ಅನುಕೂಲವಾಗುತ್ತದೆ. ನಮ್ಮದು ಒಂದು ಕಟ್ಟಡವಿದೆ. ಶನಿವಾರ ಸಂಜೆ, ಭಾನುವಾರ ಬೆಳಿಗ್ಗೆ 11 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಪಾಠ ಹೇಳಿಸಿಕೊಳ್ಳಬಹುದು' ಎಂದೆ. ಎಲ್ಲರೂ ಒಪ್ಪಿದರು.

ಎಲ್ಲರೂ ಕೆಲಸಕ್ಕೆ ಹೋಗುವವರಿದ್ದರು. ನಾವೆಲ್ಲ ಪ್ರಾಧ್ಯಾಪಕರನ್ನು ಕೇಳಿಕೊಂಡು ನಮ್ಮ ಕಟ್ಟಡದಲ್ಲೇ ಪಾಠ ಮಾಡಲು ಒಪ್ಪಿಸಿದೆವು. ಹೀಗೆ ಮೂರು–ನಾಲ್ಕು ತಿಂಗಳಾದ ಮೇಲೆ ಸುಮಾರು ಹದಿನೈದು ಜನರು ಪ್ರಾಧ್ಯಾಪಕರೊಂದಿಗೆ ಸಂಗಮಕ್ಕೆ ಹೋಗಿದ್ದೆವು. ಅದು ಕನಕಪುರದ ಹತ್ತಿರ ಇದೆ. ಊಟ, ತಿಂಡಿಗಳನ್ನು ತೆಗೆದುಕೊಂಡು ಒಂದು ವ್ಯಾನಿನಲ್ಲಿ ಅಲ್ಲಿಗೆ ಹೋದೆವು. ನೀರಿನಲ್ಲಿ ಮಕ್ಕಳಂತೆ ಆಟವಾಡಿ ಊಟ ಮಾಡಿದೆವು.

ನಮ್ಮವರೆಲ್ಲರಿಗೂ ಬಾಲ್ಯ ಮರಳಿ ಬಂದಂತೆ ಆಗಿತ್ತು. ಮಧ್ಯಾಹ್ನ ನಾವೆಲ್ಲ ಮಾತನಾಡುತ್ತಾ ಕುಳಿತಾಗ ಸ್ವಲ್ಪ ದೂರದಲ್ಲಿ ಒಂದು ಗುಂಪು ಕುಳಿತಿತ್ತು. ನಾವು ನಾಲ್ಕೈದು ಜನ ಕುತೂಹಲದಿಂದ ಅವರ ಬಳಿ ಹೋದೆವು. ಅಲ್ಲಿ ಹಿಂದಿಯ ಹಿರಿಯ ಚಿತ್ರತಾರೆ ವಹಿದಾ ರೆಹಮಾನ್ ಅವರೂ ಕುಳಿತಿದ್ದರು. ನಾನು ಹಿಂದಿ ಚಿತ್ರಗಳನ್ನು ಹೆಚ್ಚು ನೋಡುತ್ತಿದ್ದೆ. 'ಗೈಡ್' ಚಿತ್ರ ನನಗೆ ಬಹಳ ಅಚ್ಚುಮೆಚ್ಚಾಗಿತ್ತು. ನಾನೇ ಧೈರ್ಯದಿಂದ ಅವರ ಬಳಿ ಹೋಗಿ 'ನೀವು ವಹಿದಾ ರೆಹಮಾನ್ ಅಲ್ಲವೇ' ಎಂದೆ. ಅದಕ್ಕೆ ಅವರು 'ಇಲ್ಲ ಇಲ್ಲ' ಎಂದರು. ಅವರ ಬಳಿಯೇ ಕುಳಿತಿದ್ದ ಅವರ ಸಹೋದರ 'ಹೌದಮ್ಮ' ಎಂದು ಕನ್ನಡದಲ್ಲೇ ಹೇಳಿದರು.

ನನ್ನ ಸ್ನೇಹಿತೆಯರಿಗೂ ಸಂತೋಷವಾಯಿತು. ನಮ್ಮ ಜೊತೆ ಫೋಟೊ ತೆಗೆಸಿಕೊಂಡರು. ಆಗ ನನ್ನ ಬಳಿ ಕ್ಯಾಮರಾ ಇದ್ದುದು ಒಳ್ಳೆಯದಾಯಿತೆಂದು ಅಂದುಕೊಂಡೆ. ಇಂಥ ಮಹಾನಟಿಯ ಜೊತೆ ಮಾತನಾಡುವುದು, ಫೋಟೊ ತೆಗೆಸಿಕೊಳ್ಳುವುದು ಒಂದು ಹೆಮ್ಮೆ ಅಲ್ಲವೆ? ಆ ಫೋಟೊ ನಮ್ಮ ವಿದ್ಯಾರ್ಥಿ ಜೀವನದ ನೆನಪನ್ನು ತರುತ್ತದೆ.

ನಮ್ಮ ಜೊತೆ ಮೈಸೂರಿನಲ್ಲಿ ಕನ್ನಡ ಚಿತ್ರನಟ, ನಿರ್ಮಾಪಕ, ನಿರ್ದೇಶಕರಾದ ಶಿವರಾಮು ಅವರೂ ಇದ್ದರು. ಅವರೂ ಪರೀಕ್ಷೆಗಾಗಿ ಬಂದಿದ್ದರು. ವಿಶೇಷವೆಂದರೆ ಆ ಬಾರಿ 600 ವಿದ್ಯಾರ್ಥಿಗಳು ಪರೀಕ್ಷೆಗೆ ಬಂದಿದ್ದರು. ಅದೇ ಮೊದಲ ಬಾರಿಯಂತೆ ಅಷ್ಟೊಂದು ವಿದ್ಯಾರ್ಥಿಗಳು ಇದ್ದದ್ದು. ನನಗೆ ಈಗಲೂ ಖುಷಿಯಾಗುತ್ತದೆ. ನಮ್ಮ ಬಾಲ್ಯ ಆಗ ಮರಳಿ ಬಂದಿದ್ದು. ಹಳೆಯ ಫೋಟೋಗಳನ್ನು ನೋಡುತ್ತಿರುವಾಗ ಈ ಫೋಟೊ ಸಿಕ್ಕಿತು. ಇದರಲ್ಲಿ ನನ್ನ ಮಗಳೂ ಇದ್ದಾಳೆ. ■